**ಓ.ಎಸ್ ನಂ.93/2023 ಡಿ.ಡಬ್ಲ್ಯೂ-2 (ವೀರಬದ್ರೇಗೌಡ)**

**ಸಾಕ್ಷಿಯನ್ನು ದಿನಾಂಕಃ 09.01.2026 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಎಂ ಎನ್ ಆರ್ ವಕೀಲರಿಂದಃ**

1. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ದಿಃ 21.07.1975 ರಂದು ಕೆ ವಿ ಯುಸೋಪ್ ಕಾಕ ಎಂಬುವರಿಗೆ ಮಾರಾಟ ಮಾಡಲಾಗಿರುತ್ತದೆ ಎಂದು ತಿಳಿಸಿದ್ದು ಆ ಬಗ್ಗೆ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಶರಪನ್ ಬಿ ಮತ್ತು ಕೆ ವಿ ಯೂಸೋಪ್ ಕಾಕ ರವರಿಗೆ ಯಾವುದೇ ಪತ್ರಗಳು ಆಗಿರವುದಿಲ್ಲ ನಾನು ಹೇಳಿವರುವಂತ ಪತ್ರಗಳು ಸೃಷ್ಟಿ ಮಾಡಿಕೊಂಡ ದಾಖಲಾತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸದರಿ ಶರಪನ್ ಬಿ ಮತ್ತು ಕೆ ವಿ ಯೂಸೋಪ್ ಕಾಕ ರವರಿಗೂ ಮತ್ತು ದಾವಾಸ್ತಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಶರಪನ್ ಬಿ ಮತ್ತು ಕೆ ವಿ ಯೂಸೋಪ್ ಕಾಕ ರವರಿಗೂ ಮತ್ತು ಮೂಲ ಸಾಬುಲಾಲ್ ಅಲಿಯಾಸ್ ಸೈಯದ್ ಸಾಬುಲಾಲ್ ರವರಿಗೂ ಯಾವುದಾದರು ಸಂಬಂದವಿದೇಯೇ ಎಂದರೆ ಸಾಕ್ಷಿಯು ಯಾವುದೇ ಸಂಬಂದ ಇರುವುದಿಲ್ಲ ಎಂದು ನುಡಿಯುತ್ತಾರೆ.

2. ನಿಪಿ 4 ರಲ್ಲಿ ಕಂಡುಬರುವ ಸಾಬುಲಾಲ್ ಬಿನ್ ಮಹಮ್ಮದ್ ಸಾಬ್ ರವರು ಯಾರೆಂದು ತಿಳಿದಿರುತ್ತದೆಯೇ ಎಂದರೆ ಸಾಕ್ಷಿಯ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗಾಗಲೀ ನಮಗೆ ಮಾರಾಟ ಮಾಡಿದಂತಹ ಪೂರ್ವ ಮಾರಾಟ ಗಾರರಿಗಾಗಲೀ ಯಾವುದೇ ಹಕ್ಕು ಇಲ್ಲದೆ ಇರುವುದರಿಂದ ನಮಗೆ ದಾವಾಸ್ತಿಯಲ್ಲಿ ಯಾವುದೆ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿಗಳು ವಾದಿಗಳಿಗೆ ಸೇರಿದ್ದು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ವಾದಿಗಳಿಗೆ ತೊಂದರೆಯನ್ನು ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವಂತಹ ದಾಖಲಾತಿಗಳು ಸೃಷ್ಟಿ ಮಾಡಿಕೊಂಡ ದಾಖಲಾತಿಗಳು ಆಗಿರುತ್ತವೆ ಯಾಕೆಂದರೆ ಅದು ಮೂಲ ಮಾಲೀಕರಿಂದ ದಾವಾಸ್ತಿಯನ್ನು ಖರೀದಿಸಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ